**OS. No.18/2016**
**D.W-1**

**( ದಿನಾಂಕ.15-10-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)**

**ಮುಂದುವರೆದ ಪಾಟೀ ಸವಾಲುಃ** ಶ್ರೀ. G.A.D. ವಕೀಲರಿಂದ

ಹಣಮಂತರಾವರು ಯಾರ ಹತ್ತಿರ ಸಾಲ ಪಡೆದುಕೊಂಡಿದ್ದರು ಮತ್ತು ಅವರು ಹೆಸರುಗಳನ್ನು ನನಗೆ ಹೇಳಲು ಬರುವುದಿಲ್ಲ. ಅದೇ ರೀತಿ ವಾದಿಯರ ಮದುವೆಯ ಸಲುವಾಗಿ ಹಣಮಂತರಾವರು ಸಾಲ ಪಡೆದುಕೊಂಡಿದ್ದರು ಎಂದು ಹೇಳಿದ್ದು ಯಾರ ಹತ್ತಿರ ಸಾಲ ಪಡೆದುಕೊಂಡಿದ್ದರು ಎಂದು ಅವರು ಹೆಸರು ಹೇಳಲು ಬರುವುದಿಲ್ಲ. ಪಾಂಡುರಂಗರಾವರು ಯಾರ ಹತ್ತಿರ ಸಾಲ ಪಡೆದುಕೊಂಡಿದ್ದರು ಎಂದು ನನಗೆ ಹೇಳಲು ಬರುವುದಿಲ್ಲ. ಆದರೆ ಸಾಲ ಮಾಡಿಕೊಂಡಿದ್ದರು. ನಾನು ಖರೀದಿಸುವ ಮುಂಚೆ 15 ವರ್ಷ ಬರಗಾಲ ಬಿದ್ದಿತ್ತು ಎಂದರೆ ಸರಿಯಲ್ಲ. ಪಾಂಡುರಂಗರವರು ತೆಗೆದುಕೊಂಡ ಸಾಲಗಾರಿನಿಂದ ಸಾಕಷ್ಟು ತ್ರಾಸು ಅನುಭವಿಸಿದ್ದರು ಎಂದು ನಾನು ಹೇಳಿದ್ದು, ಅವರು ಯಾರು ಎಂದು ನನಗೆ ಗೊತ್ತಿಲ್ಲ.

ನಾನು ದಾವಾ ಸ್ವತ್ತನ್ನು ಎಷ್ಟು ಹಣಕ್ಕೆ ಕೊಟ್ಟು ಕೊಂಡು ಕೊಂಡಿರುತ್ತೇನೆ ಎಂದು ಬರೆದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳ ವ್ಯವಹಾರ ಆಳಂದದಲ್ಲಿ ಗವಳಿ ಹೋಟೆಲದಲ್ಲಿ ಆಗಿರುತ್ತದೆ. ಸದರಿ ಮಾತುಕತೆಯಲ್ಲಿ ಧನ್ನೂರ ಮತ್ತು ನೆಲ್ಲೂರ ಗ್ರಾಮದವರು ಎಷ್ಟ ಜನರಿದ್ದರು ಹಾಗೂ ಯಾರ್ಯಾರು ಇದ್ದರು ಹಾಗೂ ಅವರ ಹೆಸರುಗಳನ್ನು ನನಗೆ ಹೇಳಲು ಆಗುವುದಿಲ್ಲ.

ಸದರಿ ವ್ಯವಹಾರದಲ್ಲಿ ಕೊಟ್ಟ ಹಣವನ್ನು ನಗದು ರೂಪದಲ್ಲಿ ಅಥವಾ ಚೆಕ ರೂಪದಲ್ಲಿ ಕೊಟ್ಟರುತ್ತವೆಂದು ನಮ್ಮ ಪ್ರತಿವಾದಪತ್ರದಲ್ಲಿ ಬರೆದಿಲ್ಲ ಎಂದರೆ ಸರಿಯಲ್ಲ. ನಿಡಿ-2 ರಲ್ಲಿ ಕ್ರಯದ ಪೈಕಿ ಕೊಟ್ಟ ಹಣ 17 ಲಕ್ಷ 39 ಸಾವಿರ ಹಣವನ್ನು ನಗದು ರೂಪದಲ್ಲಿ ಕೊಟ್ಟಿದೆ ಎಂದು ಬರೆದಿದೆ ಎಂದರೆ ನನಗೆ ಹೇಳಲು ಆಗುವುದಿಲ್ಲ. ಸದರಿ ಹಣದ ಪೈಕಿ ಪಾವತಿ ನೀಡಲಾಗಿರುತ್ತದೆ ಎಂದು ನಿಡಿ-2 ರಲ್ಲಿ ಬರೆದಿದೆ ಎಂದರೆ ಸಾಕ್ಷಿ ನನಗೆ ಹೇಳಲು ಬರುವುದಿಲ್ಲ ಎಂದು ನುಡಿಯುತ್ತಾರೆ. ನಿಡಿ-2 ರ ಕಾಲಕ್ಕೆ ನಾನು ಮಾರಾಟಗಾರರಿಗೆ ಹಣ ಅಥವಾ ಚೆಕ್ ಕೊಟ್ಟಿರುತ್ತೇನೊ ಎಂಬುದು ನನಗೆ ನೆನಪಿಲ್ಲ. ನಿಡಿ-2 ರ ಕ್ರಯಪತ್ರದಲ್ಲಿ ಅಡಿವೆಪ್ಪ ಹಾಗೂ ಇನ್ನೊಬ್ಬ ಇದ್ದರು ಅವರ ಹೆಸರು ನನಗೆ ನೆನಪಿಲ್ಲ. ಸದರಿ ಇಬ್ಬರು ಸಾಕ್ಷಿದಾರರು ಧನ್ನೂರಿನವರು ಮತ್ತು ನೆಲ್ಲೂರ ಗ್ರಾಮಸ್ಥರು ಆಗಿರುವುದಿಲ್ಲ ಎಂದರೆ ಸರಿ. ಆ ಪೈಕಿ ಅಡಿವೆಪ್ಪ ರವರು ಲಾಡಚಿಂಚೋಳಿ ಗ್ರಾಮಸ್ದರು ಇದ್ದರು ಹಾಗೂ ಇನ್ನೊಬ್ಬರು ಯಾವ ಗ್ರಾಮದವರು ಗೊತ್ತಿಲ್ಲ. ಸದರಿ ಇಬ್ಬರು ಸಾಕ್ಷಿದಾರರ ವೈಯಕ್ತಿಕ ಪರಿಚಯವಿಲ್ಲ. ಧನ್ನೂರಿನವರು ಮತ್ತು ನೆಲ್ಲೂರ ಗ್ರಾಮಸ್ಥರನ್ನು ನಿಡಿ-2 ಸಾಕ್ಷಿದಾರರನ್ನಾಗಿ ಮಾಡಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ನಾವು ಆಳಂದದಲ್ಲಿ ಕುಳಿತು ಮಾತನಾಡಿದ್ದೇವು ಆ ಕಾರಣ ಅಲ್ಲಿಯವರನ್ನು ಮಾತ್ರ ಸಾಕ್ಷಿದಾರರನ್ನಾಗಿ ಮಾಡಿದ್ದೇವೆ ಎಂದು ನುಡಿಯುತ್ತಾರೆ.

ಸದರಿ ಧನ್ನೂರಿನವರು ಮತ್ತು ನೆಲ್ಲೂರ ಗ್ರಾಮಸ್ಥರನ್ನು ಸಾಕ್ಷಿದಾರರರನ್ನಾಗಿ ಮಾಡಿದ ಪಕ್ಷದಲ್ಲಿ ಕ್ರಯಪತ್ರದ ಬಗ್ಗೆ ಗೊತ್ತಾಗುತ್ತದೆ ಹಾಗೂ ಅವರ ಕುಟುಂಬದವರು ನ್ಯಾಯಾಲಯಕ್ಕೆ ಹೋಗುತ್ತಾರೆಂದರೆ ದುರುದ್ದೇಶದಿಂದ ಸದರಿ ಗ್ರಾಮಸ್ಥರನ್ನು ಸಾಕ್ಷಿದಾರರಾನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ. ನಿಡಿ-2 ರಲ್ಲಿ ವಾದಿಯರ ಸಹಿ ಇರುವುದಿಲ್ಲ ಎಂದರೆ ಸರಿ. ಅದೇ ರೀತಿ ನಿಡಿ-2 ರಲ್ಲಿ ಪಾಂಡುರಂಗರಾವ ಹಾಗೂ ಅವರ ಹೆಂಡತಿ ಸಹಿ ಇರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಎಲ್ಲಾ ಕಾರಬಾರುನ್ನು ಪಾಂಡುರಂಗರಾಮ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ನಿಡಿ-2 ಆಗುವದಕ್ಕಿಂತ ಮುಂಚೆ ಸದರಿ ಸರ್ವೇ ನಂಬರ ಸರ್ವೇ ಆಗಿಲ್ಲ ಎಂದರೆ ಆಗಿರಬಹುದು ಎಂದು ನುಡಿಯುತ್ತಾರೆ. ನಾನು ಕ್ರಯಕ್ಕೆ ಪಡೆಯವಕ್ಕಿಂತ ಮುಂಚೆ ಸರ್ವೇ ಮಾಡಿಸಿಲ್ಲ. ಸರ್ವೇ ಮಾಡಿದ ನಂತರ ಕ್ರಯಪತ್ರ ಆಗುತ್ತದೆ ಎಂಬ ಕಾನೂನು ಇದೆ ಎಂದರೆ ನನಗೆ ಗೊತ್ತಿಲ್ಲ.

ದಾವಾ ಸ್ವತ್ತಿನ ಚೆಕ್ಕಬಂದಿ ಪೂರ್ವಕ್ಕೆ ಧನ್ನೂರವರವ ಜಮೀನು ಇದೆ. ಸದರಿ ಧನ್ನೂರ ಜಮೀನು ಯಾರ ಹೆಸರಿನಲ್ಲಿ ಇದೆ ಮತ್ತು ಸರ್ವೆ ನಂಬರ ನನಗೆ ಗೊತ್ತಿಲ್ಲ. ಪಶ್ಚಿಮಕ್ಕೆ ವಾದಿಯವರ ಸರ್ವೇ ನಂಬರ 8 ರ ಜಮೀನು ಇದೆ. ಉತ್ತರಕ್ಕೆ ಧನ್ನೂರ ಊರಿನವರಾದ ಕುಲಕರ್ಣಿರವರ ಜಮೀನು ಇರುತ್ತದೆ. ಸದರಿ ಕುಲಕರ್ಣಿರವರ ಹೆಸರು ಮತ್ತು ಅವರ ಜಮೀನಿನ ಸರ್ವೇ ನಂಬರ ನನಗೆ ಗೊತ್ತಿಲ್ಲ. ದಕ್ಷಿಣಕ್ಕೆ ಸರ್ವೇ ನಂಬರ 131 ದೇಶಮುಖರವರ ಜಮೀನು ಇರುತ್ತದೆ.

ಸರ್ವೇ ನಂಬರ  7 ಕ್ಕೆ ಹೋಗಬೇಕಾದರೆ ಸರ್ವೇ ನಂಬರ 131 ರ ಮೇಲೆ ದಾಟಿ ಹೋಗಬೇಕು ಎಂದರೆ ಸಾಕ್ಷಿ ಮೊದಲು ದೇಶಮುಖರವರಿಗೆ ಇತ್ತು ಆದರೆ ನಮಗೆ ಇರುವುದಿಲ್ಲ ಎಂದು ನುಡಿಯುತ್ತಾರೆ. ವಾದಿಯರು ನಾವು ಸದರಿ ಸರ್ವೇ ನಂಬರ 7 ಕ್ಕೆ ದಾಟಿ ಹೋಗುವಾಗ ತಕರಾರು ಮಾಡಿರುತ್ತಾರೆ ಎಂದರೆ ಸರಿ. ಸದರಿ ತಕರಾರು ಸಲುವಾಗಿ ಆಳಂದ ಸಿವಿಲ್ ನ್ಯಾಯಾಲಯದಲ್ಲಿ ಅಸಲು ದಾವಾ ನಂಬರ 47/2017 ಅಂತ ವಾದಿಯರ ಮೇಲೆ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿ.

ಸದರಿ ದಾವೆಯಲ್ಲಿ ತಡೆಯಾಜ್ಞೆ ಕೂಡಾ ಪಡೆದಿರುತ್ತೇನೆ ಎಂದರೆ ಸರಿ. ಅದೇ ರೀತಿ  ವಾದಿಯರು ನಮಗೆ ದಾರಿ ಬಿಡದೆ ಇರುವ ಕಾರಣದಿಂದ ನರೋಣಾ ಪೋಲಿಸರಿಂದ ರಕ್ಷಣೆ ಕೂಡಾ ಪಡೆದಿರುತ್ತೇವೆ ಎಂದರೆ ಸರಿ.  ಸದರಿ ಪೋಲಿಸ ರಕ್ಷಣೆ ಸಲುವಾಗಿ  ಹೋಗಲು ಆದೇಶವಾದರು ವಾದಿಯರು ನಮಗೆ ದಾರಿ ಬಿಡದೆ ಇರುವುದರಿಂದ CPI ರವರು ನ್ಯಾಯಾಲಯಕ್ಕೆ  ವಾದಿ ಸಲ್ಲಿರುತ್ತಾರೆ ಎಂದರೆ ಸರಿ. ಇವತ್ತಿನವರೆಗೂ ವಾದಿಯರು ನಮಗೆ ದಾಟಿ ಬಿಟ್ಟಿರದೆ ಇದ್ದುದ್ದರಿಂದ ನಾವು ದಾವಾ ಸ್ವತ್ತಿನಲ್ಲಿ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು  ನಾನು ಹೋಗಿರುತ್ತೇನೆ ಎಂದು ನುಡಿಯುತ್ತಾರೆ. 2013 ರಿಂದ ಇವತ್ತಿನವರೆಗೂ ನಾವು ದಾವಾ ಸ್ವತ್ತಿನಲ್ಲಿ  ಕಾಲು ಇಟ್ಟಿಲ್ಲ ಮತ್ತು ಯಾವುದೇ ಬೆಳೆ ಬೆಳೆದಿಲ್ಲ ಎಂದರೆ ಸರಿಯಲ್ಲ.

ನಿಡಿ-2 ಆಗುವ ಕಾಲಕ್ಕೆ ಒಂದು ಅಡಮಾನ ರದ್ದತಿ ಪತ್ರ ಅಂದರೆ ನಿಡಿ-5 ಆಗಿರುತ್ತದೆ ಎಂದರೆ ಸರಿ. ನಿಡಿ-5 ರಲ್ಲಿ ನನಗೆ 11 ಲಕ್ಷ ಹಣವನ್ನು ಪಾಂಡುರಂಗರಾವರು ಕೊಟ್ಟಿರುತ್ತಾರೆಂದರೆ, ಸಾಕ್ಷಿ 17 ಲಕ್ಷ 39 ಸಾವಿರಕ್ಕೆ ಕ್ರಯದ ವ್ಯವಹಾರ ಆಗಿದ್ದು, ಆ ಪೈಕಿ 11 ಲಕ್ಷ ಹಣವನ್ನು ಈಗಾಗಲೇ ಅಡಮಾನ ಪತ್ರಕ್ಕೆ ಕೊಟ್ಟಿದ್ದು ಅದನ್ನು ಕಳೆದು 6 ಲಕ್ಷ 39 ಸಾವಿರ ಹಣವನ್ನು ನಾನು ಪಾಂಡುರಂಗರವರಿಗೆ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ದಿನದಂದು ನಾನು ಪಾಂಡುರಂಗರಾವ 6 ಲಕ್ಷ 39 ಸಾವಿರ ಹಣವನ್ನು ಮಾತ್ರ ಕೊಟ್ಟಿರುತ್ತೇನೆ ಎಂದರೆ ಸರಿ. ಸದರಿ ವಿಷಯವನ್ನು ನನ್ನ ಪ್ರತಿವಾದ ಪತ್ರದಲ್ಲಿ ಹೇಳಿಲ್ಲ ಎಂದರೆ ನನಗೆ ಗೊತ್ತಿಲ್ಲ.

ನಿಡಿ-4 ಮತ್ತು 5 ರ ಬಗ್ಗೆ ನನ್ನ ಪ್ರತಿವಾದಪತ್ರದಲ್ಲಿ ಯಾವುದೇ ಪ್ರಸ್ತಾಪ ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ. ಪಾಂಡುರಂಗರವರು 2013 ರಲ್ಲಿ 11 ಲಕ್ಷ ನನಗೆ ಕೊಟ್ಟಿದ್ದರಿಂದ ಮಾರಾಟ ಮಾಡುವ ಪ್ರಶ್ನೆಯೇ ಬರುವುದಿಲ್ಲ ಎಂದರೆ ಸರಿಯಲ್ಲ. ನಿಡಿ-4 ಮತ್ತು 5 ರಲ್ಲಿ ವಾದಿಯರ ಸಹಿ ಇಲ್ಲ ಎಂದರೆ ಸರಿ. 2010 ರಲ್ಲಿ 11 ಲಕ್ಷವನ್ನು ನಾನು ಪಾಂಡುರಂಗರಾವರವರಿಗೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. 2010 ರಲ್ಲಿ 11 ಲಕ್ಷ ಕೊಟ್ಟ ಬಗ್ಗೆ ಯಾವುದೇ ರಸೀದಿಯನ್ನು ಪಾಂಡುರಂಗರಾವರಿಂದ ಪಡೆದಿಲ್ಲ ಎಂದರೆ ನನಗೆ ಮಾಹಿತಿ ಇಲ್ಲ.

ನಾನು ಪಾಂಡುರಂಗರಾವರವರಿಗೆ 11 ಲಕ್ಷ ಕೊಟ್ಟಿಲ್ಲ ಆ ಕಾರಣದಿಂದ ಅವರು ನನಗೆ ರಸೀದಿ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಹಣ ಕೊಟ್ಟಿದ್ದರಿಂದಲೇ ನಿಡಿ-4 ನ್ನು ಬರೆದುಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನಿಡಿ-4 ರಲ್ಲಿ ಬರೆದ ಸಂಗತಿಗಳನ್ನು ಹೊರತುಪಡಿಸಿ ಬೇರೆ ಯಾವುದೇ ಹಣ ಕೊಟ್ಟಿದ್ದರ ಬಗ್ಗೆ ನನ್ನ ಬಳಿ ದಾಖಲೆ ಇರುವುದಿಲ್ಲ.

ನಿಡಿ-4 ರಂತೆ ನಾನು ಪಾಂಡುರಂಗರಾವರವರಿಗೆ ಹಣ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಿಡಿ-2 ನ್ನು ಏನು ಹಣ ಕೊಡದೆ ಪಾಂಡುರಂಗರಾವರವರಿಂದ ಬರೆಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. 6 ಲಕ್ಷ 39 ಸಾವಿರ ಹಣವನ್ನು ಕಡಗಂಚಿ ಮತ್ತು ಆಳಂದ ಬ್ಯಾಂಕಿನಿಂದ ತೆಗೆದುಕೊಂಡು ಬಂದು ಕೊಟ್ಟಿರುತ್ತೇನೆ. ಸದರಿ ಬ್ಯಾಂಕಿನಿಂದ ಹಣ ಪಡೆದ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಆಗುವುದಿಲ್ಲ. ನಾನು ಹಣ ಕೊಡದೆ ಇರುವ ಕಾರಣ ದಾಖಲೆಯನ್ನು ಹಾಜರುಪಡಿಸಲು ಆಗುವುದಿಲ್ಲ ಎಂದು ಸುಳ್ಳ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಿಡಿ-2 ರಲ್ಲಿ ಕಾಣಿಸಿದ 17 ಲಕ್ಷ 39 ಸಾವಿರ ಸರಕಾರಿ ಮಾರುಕಟ್ಟೆ ಬೆಲೆಯಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. 2013 ರಲ್ಲಿ ದಾವಾ ಸ್ವತ್ತಿನ ಜಮೀನಿನ ಒಂದು ಎಕರೆ ಬೆಲೆ 10 ಲಕ್ಷ ಇತ್ತು ಎಂದರೆ ಗೊತ್ತಿಲ್ಲ. ನಾನು ಖರೀದಿಸಿದ ಕಾಲಕ್ಕೆ ಒಂದು ಎಕರೆಗೆ ಎಷ್ಟು ಹಣ ಎಂದು ಖರೀದಿಸಿರುತ್ತೇನೆಂದು ಹೇಳಲು ಬರುವುದಿಲ್ಲ.

**OS. No.18/2016**
**D.W-1**

ನಿಡಿ-2 ರ ಜಮೀನು ಕನಿಷ್ಠ ಮಟ್ಟದ ಜಮೀನು ಅಂದರೆ C ಜಮೀನು ಇದೆ ಎಂದು ಕಡಿಮೆ ಮೌಲ್ಯ ತೋರಿಸಿ ಖರೀದಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಪಾಂಡುರಂಗರಾವರನ್ನು ಮುಂದೆ ಇಟ್ಟುಕೊಂಡು ನಿಡಿ-2 ನ್ನು ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಡಿ-2 ರಂತೆ ನಾನು ಪಾಂಡುರಂಗರಾವರಿಗೆ ಒಂದು ರೂಪಾಯಿ ಕೂಡ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಿಡಿ-2 ರಂತೆ ನನಗೆ ಯಾವುದೇ ಕಬ್ಜೆ ಬಂದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಯಾವಾಗಲು ವಾದಿಯರೆ ಸ್ವಾಧೀನ ಇರುತ್ತಾರೆ ಎಂದರೆ ಸರಿಯಲ್ಲ.

ವಾದಿಯರಿಗೆ ಗೊತ್ತಾಗದ ರೀತಿಯಲ್ಲಿ ನಾನು ಒಂದು ಸುಳ್ಳು ಕ್ರಯಪತ್ರವನ್ನು ಸೃಷ್ಟಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಿಡಿ-2 ರಿಂದ ನನಗೆ ಯಾವುದೇ ರೀತಿ ದಾವಾ ಸ್ವತ್ತಿನಲ್ಲಿ ಹಕ್ಕು ಹಿತಾಸಕ್ತಿ ಮತ್ತು ಸ್ವಾಧೀನ ಬಂದಿರುವುದಿಲ್ಲ ಎಂದರೆ ಸರಿಯಲ್ಲ.ನಾನು ವಾದಿಯರನ್ನು ಕೇಳಲಾರದೇ ಸುಳ್ಳು ಕ್ರಯಪತ್ರ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಖರೀದಿಸುವಕ್ಕಿಂತ ಮುಂಚೆ ಸರ್ವೆ ನಂಬರ 7, 8 ಹಾಗೂ 131 ನ್ನು ಪಾಂಡುರಂಗರಾವರೇ ಸಾಗುವಳಿ ಮಾಡುತ್ತಿದ್ದರು ಎಂದರೆ ಸರಿ. ಪಾಂಡುರಂಗರಾವರವರಿಗೆ ದಾವಾ ಸ್ವತ್ತನ್ನು ಮಾರಾಟ ಮಾಡಲು ಯಾವುದೇ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ಮೊದಲು ಪಾಂಡುರಂಗರಾವರು ದಾವಾ ಸ್ವತ್ತನ್ನು ಸಾಗುವಳಿ ಮಾಡುತ್ತಿದ್ದರು,

**D.W-1**

ಅವರು ತೀರಿಕೊಂಡ ನಂತರ ಅವರ ಹೆಂಡತಿ ಮತ್ತು ಮಕ್ಕಳು ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸಾಕ್ಷಿ ಸರ್ವೇ ನಂಬರ 131 ಮತ್ತು 8 ನ್ನು ಅವರ ಹೆಂಡತಿ ಮತ್ತು ಮಕ್ಕಳು ಮಾಡುತ್ತಿದ್ದಾರೆ, ಆದರೆ ಸರ್ವೇ ನಂಬರ 7 ರಲ್ಲಿ ನಾನು ಸಾಗುವಳಿ ಮಾಡುತ್ತಿದ್ದೇನೆ ಎಂದು ನುಡಿಯುತ್ತಾರೆ. ನಾನು ಸರ್ವೇ ನಂಬರ 7 ರಲ್ಲಿ ಸಾಗುವಳಿ ಮಾಡುತ್ತಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಆಳಂದ**